# ಕಾಯಕವೇ ಕೈಲಾಸ



ಅದೊಂದು ದಿನ ಪುಟ್ಟ ಬಾಲಕ ರಾಹುಲನಿಗೆ ಬಹಳ ಬೇಸರವಾಗಿತ್ತು. ತನ್ನ ಶಾಲಾ ಬ್ಯಾಗನ್ನು ಹೆಗಲಿಗೇರಿಸಿ ನಡೆದು ಹೋಗುತ್ತಿದ್ದನಾತ. ಆತನ ಮನೆಯ ಎದುರು ಒಂದು ಸುಂದರ ಉದ್ಯಾನವನವಿತ್ತು. ಆ ಉದ್ಯಾನವನದ ಇನ್ನೊಂದು ಪಕ್ಕದಲ್ಲಿಯೇ ಆತನ ಶಾಲೆ. ಆದ್ದರಿಂದ ಆತ ಉದ್ಯಾನವನದ ಮೂಲಕವೇ ಶಾಲೆಗೆ ಹೋಗುತ್ತಿದ್ದ. ಆದರೆ ಇಂದು ಶಾಲೆಗೆ ಹೋಗಲು ಆತನಿಗೆ ಇನಿತೂ ಇಷ್ಟವಿರಲಿಲ್ಲ. ಆತನ ಮನಸ್ಸು ಹಾಗೆಂದರೆ ಕೇಳುವವರಾರು? ಹೋಗಲೇಬೇಕಿತ್ತು, ಹಾಗಾಗಿ ಹೊರಟಿದ್ದ. ನಡೆದು ಹೋಗುತ್ತಿರುವಾಗ ಅಸಹನೆ ಮತ್ತು ಬೇಸರದಿಂದ ಕಾಲಿನಿಂದ ಕಲ್ಲು  ಬಗೆಯುತ್ತಿದ್ದ.

'ಛೀ! ಈ ಶಾಲೆಯಲ್ಲೇನಿದೆ? ಬರೀ ಓದು, ಬರಿ. ಎಷ್ಟೊಂದು ಕೆಲಸ? ಓದಿ ಓದಿ, ಬರೆದೂ ಬರೆದೂ ಸಾಕಾಗಿ ಹೋಗಿದೆ.'

ಹಾಗೆಯೇ ಯೋಚಿಸುತ್ತಾ ಸುತ್ತ– ಮುತ್ತ ನೋಡಿದನಾತ. ಹಲವು ತರಹದ ಪಕ್ಷಿಗಳು, ದುಂಬಿಗಳು ಗುಂಯ್‌ಗುಡುತ್ತಾ ಸಂತೋಷದಿಂದ ಹಾರಾಡುತ್ತಿದ್ದವು. ಅಳಿಲುಗಳು ತಮ್ಮ ಸುಂದರ ಗುಚ್ಛದಂತಹ ಬಾಲ ಅಲುಗಾಡಿಸುತ್ತಾ ಅಲ್ಲಿಂದಿಲ್ಲಿಗೆ ಸಂತಸದಿಂದ ಓಡಾಡುತ್ತಿದ್ದವು.

'ಆಹಾ! ಎಷ್ಟೊಂದು ಆರಾಮವಾಗಿವೆ. ಇವರಿಗೇನೂ ಕೆಲಸವಿಲ್ಲವಲ್ಲ? ನನ್ನ ಹಾಗೆ ಶಾಲೆಗೆ ಹೋಗಬೇಕೇನು?' ಎಂದು ರಾಹುಲ ಯೋಚಿಸಿದ.

ಇದನ್ನು ಕಂಡ ಬಳಿಕ ರಾಹುಲನಿಗೆ ಶಾಲೆಗೆ ಹೋಗುವುದೇ ಬೇಡವೆನಿಸಿತು. ಹಾಯಾಗಿ ಇವರೊಂದಿಗೇ ಆಟವಾಡಿಕೊಂಡಿರುವುದೇ ಉತ್ತಮವೆಂದಿನಿಸಿತು. ನಿಧಾನವಾಗಿ ಉದ್ಯಾನವನದ ನೆಲದ ಮೇಲೆ ಕುಳಿತುಕೊಂಡ. ಪುಟ್ಟ ಮೈನಾವೊಂದು ಚಿಲಿಪಿಲಿಗುಡುತ್ತ ಅತ್ತ ಬಂತು. ರಾಹುಲ ಮೈನಾವನ್ನು ಮಾತನಾಡಿಸಿದ.

'ಹಲೋ ಚಿಲಿಪಿಲಿ, ನನ್ನೊಂದಿಗೆ ಆಟವಾಡುವೆಯಾ?'

ಚಕಿತಗೊಂಡ ಮೈನಾ ಅವನತ್ತ ನೋಡಿತು. 'ಆಟ! ಏನೆಂದುಕೊಂಡಿರುವಿ ನೀನು? ಆಟವಾಡಲು ನನ್ನಲ್ಲಿ ಸಮಯವಾದರೂ ಎಲ್ಲಿದೆ? ಗೂಡು ಕಟ್ಟಬೇಕಾಗಿದೆ. ನನಗೆಷ್ಟು ಕೆಲಸಗಳಿವೆ?' ಹಾಗೆನ್ನುತ್ತಾ ಆ ಪುಟ್ಟ ಹಕ್ಕಿ ಅಲ್ಲಲ್ಲಿ ಬಿದ್ದಿದ್ದ ಒಣಗಿದ ಹುಲ್ಲು, ರೆಂಬೆ– ಕೊಂಬೆಗಳನ್ನು ಆರಿಸಲಾರಂಭಿಸಿತು.

ರಾಹುಲ ಝೇಂಕರಿಸುತ್ತಿದ್ದ ದುಂಬಿಗಳತ್ತ ತಿರುಗಿದ. ಮಕರಂದ ಹೀರುತ್ತಿದ್ದ ದುಂಬಿಯೊಂದನ್ನು ಆತ ಮಾತನಾಡಿಸಿದ. 'ಹಲೊ, ನಾನು ರಾಹುಲ, ನನ್ನೊಂದಿಗೆ ಆಡುವೆಯಾ?' ಎಂದನು.

ದುಂಬಿ ತಲೆ ಎತ್ತಿ ರಾಹುಲನನ್ನು ನೋಡಿ ಝೇಂಕರಿಸಿತು. 'ಆಟ! ನಾನು ಮಕರಂದ ಹೀರುತ್ತಿರುವುದನ್ನು ಕಾಣೆಯಾ? ನನ್ನ ರಾಣಿ ಜೇನುತುಪ್ಪಕ್ಕಾಗಿ ಮಕರಂದ ತರಲು ಹೇಳಿದ್ದಾಳೆ, ಆಟಕ್ಕೆಲ್ಲಿ ಸಮಯ?'

ನಿರಾಶನಾದ ರಾಹುಲ ಅತ್ತಿಂದಿತ್ತ ನೋಡಿದ. ಕರ್ರಗಿನ ಹೊಳೆಯುವ ಕಣ್ಣಿನ, ತುಂಬು ಬಾಲದ ಅಳಿಲು ಕಾಣಿಸಿತು.

'ಅಳಿಲೇ, ಅಳಿಲೇ! ಚುಂ ಚುಂ ಅಳಿಲೇ, ನೀನಾದರೂ ನನ್ನೊಂದಿಗೆ ಆಡುವೆಯಾ?'

ತನ್ನ ಪುಟ್ಟ ತಲೆಯನ್ನು ಇಲ್ಲವೆಂಬಂತೆ ಅಲುಗಾಡಿಸುತ್ತಾ ಅಳಿಲು, 'ಕ್ಷಮಿಸು ಗೆಳೆಯಾ, ನನಗೀಗ ಆಹಾರ ಸಂಗ್ರಹಿಸಬೇಕಾಗಿದೆ. ಇಲ್ಲವಾದಲ್ಲಿ ಚಳಿಗಾಲದಲ್ಲಿ ಆಹಾರವಿಲ್ಲದೆ ಸಾಯಬೇಕಾದೀತು, ನನಗೆ ಸಮಯವೇ ಸಾಲದಾಗಿದೆ. ಹೀಗಿರುವಾಗ ನಿನ್ನೊಂದಿಗೆ ಆಟವಾದರೂ ಹೇಗೆ ಆಡಲಿ?'

ಬಡಪಾಯಿ ರಾಹುಲ! ನಿರಾಸೆಯಿಂದ ಸುತ್ತ–ಮುತ್ತ ನೋಡಿದ. ಆತ ಕಂಡ ಪ್ರತಿಯೊಂದು ಪ್ರಾಣಿ– ಪಕ್ಷಿಗಳೂ ತಮ್ಮ ತಮ್ಮ ಕೆಲಸದಲ್ಲಿ ನಿರತವಾಗಿದ್ದವು. ಪುಟ್ಟ ಇರುವೆಗಳೂ ಇದಕ್ಕೆ ಹೊರತಾಗಿರಲಿಲ್ಲ. ಶಿಸ್ತಿನ ಸಿಪಾಯಿಗಳಂತೆ ಅವುಗಳು ಸಾಗಿ, ತಮ್ಮ ಕೆಲಸ ನಿರ್ವಹಿಸುವುದನ್ನು ಆತ ಕಂಡ.

ಇವೆಲ್ಲವುಗಳನ್ನು ನೋಡಿದ ರಾಹುಲ ಪಾಠ ಕಲಿತ. ತನ್ನ ತಪ್ಪನ್ನು ಅರಿತ. 'ನಾನೂ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಬೇಕು. ಅದು ನನ್ನ ಕರ್ತವ್ಯ' ಎಂದು ಮನವರಿಕೆಯಾಗಿ ಒಂದು ನಿಮಿಷವೂ ತಡ ಮಾಡದೆ ತನ್ನ ಶಾಲಾ ಬ್ಯಾಗ್ ಎತ್ತಿ ಶಾಲೆಯತ್ತ ಲಗುಬಗೆಯಿಂದ ನಡೆಯಲಾರಂಭಿಸಿದ.

**-ಶಾಲಿನಿ ವಿ. ಕಾಮತ್, ಮಹಾರಾಷ್ಟ್ರ**

## ನಿಮಗೆಷ್ಟು ಗೊತ್ತು

## ಕರ್ನಾಟಕದ ವರದಿಗಳು..

1) ಗೋಕಾಕ್ ವರದಿ– ಶಾಲಾ ಶಿಕ್ಷಣದಲ್ಲಿ ಕನ್ನಡ ಸ್ಥಾನಮಾನ.
2) ಎಚ್ಚೆನ್ ವರದಿ– ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮ ಕಡ್ಡಾಯ.
3) ನಾರಾಯಣ ಸ್ವಾಮಿ ವರದಿ– ಆಡಳಿತದಲ್ಲಿ ಕನ್ನಡ ಅನುಷ್ಠಾನ ರೀತಿ.
4) ಮಹಿಷಿ ವರದಿ– ಕನ್ನಡಿಗರ ಉದ್ಯೋಗವಕಾಶ.
5) ಉದ್ಯೋಗ ಸಮಿತಿ ವರದಿ– ಮಹಿಷಿ ವರದಿ ಪರಿಷ್ಕರಣೆ.
6) ಒಡೆಯರ ವರದಿ– ಕನ್ನಡ ವಿ.ವಿ.ಗಳ ಸ್ವರೂಪ ನಿರ್ಧಾರ.
7) ಅಹುಜಾ ಸಮಿತಿ ವರದಿ– ಕಾವೇರಿ ನೀರಿನ ಬಳಕೆ.
8) ಬಚಾವತ್ ವರದಿ– ಕೃಷ್ಣಾ ನದಿ ನೀರು ಹಂಚಿಕೆ.
9) ಫಜಲ್ ಅಲಿ ವರದಿ– ಕರ್ನಾಟಕ ಏಕೀಕರಣ ಕುರಿತು ಸಲಹೆ.
10) ಮಹಾಜನ್ ವರದಿ– ಕರ್ನಾಟಕ– ಮಹಾರಾಷ್ಟ್ರ–ಕೇರಳ ಗಡಿ ವಿವಾದ.
11) ನಂಜುಡಪ್ಪ ವರದಿ– ಹಿಂದುಳಿದ ತಾಲೂಕುಗಳ ಅಭಿವೃದ್ಧಿ.

**-ಹನುಮಂತ ಮ.ದೇಶಕುಲಕರ್ಣಿ,**
**ಬೋಗೇನಾಗರ ಕೊಪ್ಪ.**